''ಮೃತ್ತಿಕೆ'' ತಲೆಗೆ ಎರೆದು, ಸ್ನಾನ ಮಾಡಿ, ಮಡಿಯಾದ ಮೇಲೆ ಮನೆಯೊಳಗೆ ಪ್ರವೇಶ.

ಹುಡುಗರು, ಹಿರಿಯರ ಕ್ಷೌರವಾದ ಮೇಲೆ ವಿಧವೆಯರ ಸರದಿ. ಆಗ ಬ್ರಾಹ್ಮಣರ ಮನೆಯಲ್ಲಿ ಗಂಡ ಸತ್ತವರು ಮಂಡೆಬೋಳಿಸಿ, ಕೆಂಪುಸೀರೆ ಉಡುತ್ತಿದ್ದ ವಿಧವೆಯರು ಕ್ಷೌರ ಮಾಡಿಸಿಕೊಳ್ಳುವುದು ವಾಡಿಕೆ. ಆದರೆ ವಿಧವೆಯರು, ಕ್ಷೌರಿಕನೆಂದಾಗಲಿ, ಅವನ ಹೆಸರು ಹಿಡಿದಾಗಲೀ ಕರೆವ ರಿವಾಜಿರಲಿಲ್ಲ. ''ತಲೆ ಮುಟ್ಟುವವ'' ಚಾಲ್ತಿ ಪರ್ಯಾಯ ಪದ.

ಸುಮಂಗಲಿಯ ಕೇಶಮುಂಡನ ಮಾಡಿ ವಿಧವೆ ಪಟ್ಟಕಟ್ಟುವುದು ದಾರುಣ ಸನ್ನಿವೇಶ ಮಾತ್ರವಲ್ಲ, ಅತ್ಯಂತ ನೋವಿನ ಸಂಗತಿಯೆಂಬುದು ತಮ್ಮುನ ಅನುಭವದ ಮಾತು. ಅವನೇ ಹೇಳಿದ ಆ ಹೃದಯವಿದ್ರಾವಕ ಘಟನೆ ಹೀಗಿತ್ತು:

''ಹಿರೇಹಿತ್ತಲು ಸಣ್ಣಮ್ಮ, ದಾಸನಕೊಡುಗೆ ಪುಟ್ಟಭಟ್ಟರ ಸೊಸೆಯಾಗಿ ಬಂದಾಗ ಹನ್ನೆರಡೋ ಹದಿಮೂರರದೋ ಹರಯ. ಸಪೂರ ಸಪೂರಾಗಿ ಎತ್ತರಕ್ಕೆ ಬೆಳ್ಳಗೆ ಬೆಳದ ಹುಡುಗಿ. ಮಂಟಪದಲ್ಲಿ ಅಂಗೈಅಗಲದ ಜರಿಯಂಚಿನ ಗಿಳಿ ಹಸಿರಿನ ರೇಷ್ಮೆ ಸೀರೆಯುಟ್ಟು, ಬಂಗಾರದೊಡವೆ ತೊಟ್ಟು, ಉದ್ದನೇ ಜಡೆ, ಅದಕ್ಕೆ ಜಡೆಬಿಲ್ಲೆ ಬೇರೆ! ಮದುಮಗಳಾಗಿ ಮುದ್ದು ಮುದ್ದಾಗಿ ಕುಳಿತ ಸಣ್ಣಮ್ಮನ್ನ ನೆನೆದಾಗಲೆಲ್ಲಾ ಕಣ್ಣಿಗೆ ಕಟ್ಟುತ್ತೆ. ಆದ್ರೆ ಏನ್ಮಾಡೋದು ಹೇಳಿ, ಸಣ್ಣಮ್ಮನ ದುರಾದೃಷ್ಟ. ಮದುವೆಯಾಗಿ ವರ್ಷ ಆಗಿರಲಿಲ್ಲ. ಗಂಡ ವಾಸುಭಟ್ಟ ಪ್ಲೇಗ್ ರೋಗಕ್ಕೆ ಬಲಿಯಾದ. ಸತ್ತ ಹತ್ತನೇ ದಿನ ಸಣ್ಣಮ್ಮನ ಮುಡಿ ತೆಗೆಯಲು ಕರೆಬಂತು. ನಾನು ಜೀತದಾಳಲ್ಲವೇ? ಹೋದೆ. ಸಣ್ಣಮ್ಮನ ಕೈಬಳೆ ಒಡೆಯುವುದು, (ಕೈತುಂಬ ಹಸಿರುಬಳೆ ತೊಡುವುದೆಂದರೆ ಎಂಥ ಸಂಭ್ರಮ ಆ ಪುಟ್ಟಿಗೆ) ಒತ್ತಿ ಹಿಡಿದು ಹಣೆ ಕುಂಕುಮ ಅಳಿಸುವುದು ನೋಡುವುದಕ್ಕೆ ಅಸಾಧ್ಯ ಕಣ್ರೋ. ಎಲ್ಲ ಮುಗಿದ ಮೇಲೆ ಸಣ್ಣಮ್ಮನ ಮುಡಿ ತೆಗೆಯಲು ನನಗೆ ಹೇಳಿದರು. ಆದರೆ ಮನಸ್ಸು ಬಿಲ್‌ಕುಲ್ ಒಪ್ಪಲಿಲ್ಲ. ನನ್ನ ಮಗಳ ಮುಡಿ ಕತ್ತರಿಸಿದಂತೆ ಕಣ್ರೋ! ಕರುಳಿಗೇ ಕತ್ತರಿಯಾಡಿಸಿದ ಹಾಗೇ. ಆದರೆ ಮುಡಿ ತೆಗೆಯದೇ ಮುಂದಿನ ಕಾರ್ಯಗಳನ್ನು ನಡೆಸುವುದು ಅಸಾಧ್ಯವೆಂದು ಭಟ್ಟರು ಹಟ ಹಿಡಿದರು. ನೆರೆದ ಹಿರಿಯರನೇಕರು ನನಗೆ ಬಲವಂತ ಮಾಡಿದರು. ಅಸಹಾಯಕನಾಗಿ ಸಣ್ಣಮ್ಮನ ಮುಡಿ ಕತ್ತರಿಸಿದೆ. ಆ ಕತ್ತರಿಸಿದ ಮುಡಿಯನ್ನು ಮನೆಗೆ ತಂದು ಈಗಲೂ ಜೋಪಾನವಾಗಿರಿಸಿಕೊಂಡಿದ್ದೇನೆ. ಆ ಕೂಪನ್ನು ಸಹ. ಮುಂದೆಂದೂ ಗಂಡ ಸತ್ತವರ ಮುಡಿ ತೆಗೆಯುವ ದುಷ್ಟತನಕ್ಕೆ ಕೈ ಹಾಕುವುದಿಲ್ಲವೆಂದು ಅಂದೇ ಆಣೆ ಮಾಡಿದೆ. ಸತ್ರಾಗ ನನ್ನ ಕಾಷ್ಠದ ಜೊತೆ ಸಣ್ಣಮ್ಮನ ಮುಡಿ ಹಾಗೂ ಕತ್ತರಿಸಿದ ಆ ಕೂಪನ್ನೂ ಹಾಕಿ ಬೆಂಕಿ ಹಚ್ಚಿ ಸುಡುವಂತೆ ಮಕ್ಕಳಿಗೆ ಹೇಳಿದ್ದೇನೆ. ಯಾವ ಜನ್ಮದಲ್ಲಿ ಏನ್ ಪಾಪ ಮಾಡಿದ್ನೇನೋ, ಈ ಜನ್ಮದಲ್ಲಿ ಕ್ಷೌರಿಕನಾಗಿ ಹುಟ್ಟಿದ್ದೇನೆ ನೋಡಿ'' ಹೇಳಿ ನಿಟ್ಟುಸಿರುಗರೆದಿದ್ದ.

ಆರುಷ್‌ನಿಗೆ ಆಗುತ್ತಿದ್ದಂತೆ, ಆರ್ಯ ಪೀಠವನ್ನೇರಿದ. ''ಶಾರ್ಟೋ, ಸೈಡ್ ಕಟ್ಟಿಂಗೋ?'' ಯಥಾಪ್ರಕಾರ ಕೇಶಕೌಶಲಿ ನನ್ನನ್ನು ಪ್ರಶ್ನಿಸಿದ. ಆದರೆ ನಾನು ಉತ್ತರಿಸುವ ಮುನ್ನ ಆರ್ಯನೇ ಖಡಕ್ಕಾಗಿ ಹೇಳಿದ: ''ಕೊಹ್ಲಿ ಸ್ಟೈಲ್!'' ಕ್ರಿಕೆಟ್ ಪ್ರಿಯನಾದ ಅವ ವಿರಾಟ್ ಕೊಹ್ಲಿ ಫ್ಯಾನ್!! ಊಹೆಗೂ ನಿಲುಕದ ಎಷ್ಟೊಂದು ಬಗೆಯ ಹೇರ್ ಸ್ಟೈಲ್‌ಗಳ... ಜೊತೆಗೆ ಸಿನಿಮಾ ಹಾಗೂ ಕ್ರಿಕೆಟ್ ಹಿರೋಗಳ ಹೇರ್ ಸ್ಟೈಲ್ ಮಾದರಿಗಳು...

ನೆನಪು ಹಸ್ರಹಾವು. ಮುಟ್ಟಿದರೆ ಸಾಕು, ಬಿಚ್ಚುವುದು ಬಗೆಬಗೆಯ ಬಣ್ಣ!

ಕುಲಕಸುಬನ್ನೇ ನಂಬಿ ಸಂಸಾರ ಹೊರೆಯಲು ಏದುಸಿರು ಬಿಡುತ್ತಿದ್ದ ತಮ್ಮು, ವಾದ್ಯವೃತ್ತಿ ಉಪಕಸುಬಾಗಿಸಿಕೊಂಡೂ ಏಗುತ್ತಿದ್ದ. ನಮ್ಮೂರ ಸುತ್ತಮುತ್ತ ನಡೆಯುತ್ತಿದ್ದ ಮದುವೆ, ಚೌಲ, ಉಪನಯನ, ಗೃಹಪ್ರವೇಶ ಇತ್ಯಾದಿ ಶುಭಸಮಾರಂಭಗಳಲ್ಲಿ ಚೌರದ ತಮ್ಮು, ವಾದ್ಯದ ತಮ್ಮುವಾಗಿ ಬದಲಾಗಿ ಬಿಡುತ್ತಿದ್ದ! ಆ ಸನ್ನಿವೇಶದಲ್ಲಿ ತಮ್ಮುವಿಗೆ ಸಿಗುತ್ತಿದ್ದ ಗೌರವ – ಮರ್ಯಾದೆಗಳೇ ಬೇರೆ!